# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್. ರಸ್ತೆ, ತುಮಕೂರು – 572 103

ದೂರವಾಣಿ : 0816–2254546 0816–2255596, 0816–2255597 ಫ್ಯಾಕ್ಸ್ : 0816–2270719


ಸಂಖ್ಯೆ: ತುವಿ:ಶೈ.ವಿ:2023–24: 2408 ದಿನಾಂಕ:30.09.2023

## ಸುತ್ತೋಲೆ

ವಿಷಯ: 2023–24ನೇ ಸಾಲಿನಲ್ಲಿ ಮರುಪ್ರವೇಶ ಹೊಂದಿದ CBCS ವಿದ್ಯಾರ್ಥಿಗಳ ಕುರಿತು.

ಉಲ್ಲೇಖ:1) ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು, ಇವರ ಪತ್ರ ಸಂಖ್ಯೆ: ವಿವಿ ಕಾತು: 2023–24 ದಿನಾಂಕ: 22.08.2023

2) ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ 30.09.2023

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಈ ಹಿಂದೆ CBCS ಪಠ್ಯಕ್ರಮದ ವ್ಯಾಸಂಗದಲ್ಲಿ ವಿದ್ಯಾಭ್ಯಾಸವನ್ನು ಮೊಟಕುಗೊಳಿಸಿ, ಪ್ರಸ್ತುತ ವಿದ್ಯಾಭ್ಯಾಸವನ್ನು ಮುಂದುವರೆಸಲು ಇಚ್ಛಿಸಿ ಪ್ರವೇಶಾತಿಗಾಗಿ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳ ಸಂಬಂಧ ಉಲ್ಲೇಖ(1)ರ ಪತ್ರದಲ್ಲಿ ಮನವಿ ಸಲ್ಲಿಸಲಾಗಿರುತ್ತದೆ. ತತ್ಸಂಬಂಧ, ಪ್ರಸ್ತುತ ಸಾಲಿನಲ್ಲಿ ಜಾರಿಯಲ್ಲಿರುವ NEP ಪಠ್ಯಕ್ರಮವನ್ನು ಅಧ್ಯಯನ ಮಾಡಬೇಕಾಗಿದ್ದು, ಸದರಿ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಉಲ್ಲೇಖ(2)ರ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಕೆಳಕಂಡ ಅಂಶದನ್ವಯ ಹಾಗೂ ವಿಶ್ವವಿದ್ಯಾನಿಲಯದ ನಿಯಮಾವಳಿಯನ್ವಯ ಕ್ರಮ ಕೈಗೊಳ್ಳುವಂತೆ ತಿಳಿಸಲಾಗಿದೆ.

ಸದರಿ ವಿದ್ಯಾರ್ಥಿಗಳು ಪ್ರಸ್ತುತ ಪಠ್ಯಕ್ರಮದಲ್ಲಿ ತಮಗೆ ಅನ್ವಯಿಸುವ ವಿಷಯಗಳನ್ನು ತರಗತಿಯಲ್ಲಿ ಹಾಜರಿದ್ದು ಕಲಿಯಬೇಕು ಮತ್ತು ಅವರ ಹಾಜರಾತಿಯು ಕನಿಷ್ಠ ಶೇಕಡ 75 ಕ್ಕಿಂತ ಕಡಿಮೆ ಇರಕೂಡದು. ಈ ವಿದ್ಯಾರ್ಥಿಗಳು NEP ಪಠ್ಯಕ್ರಮಕ್ಕೆ ಸಂಬಂಧಿಸದ ಉಳಿದ ವಿಷಯಗಳಿಗೆ ಉಪನ್ಯಾಸಕರ ಸಹಾಯ ಪಡೆದು ವಿದ್ಯಾಭ್ಯಾಸ ಮಾಡಲು ತಿಳಿಸಿದೆ.

ಆದೇಶದ ಮೇರೆಗೆ,

Mangalahomu M.

ಉಪಕುಲಸಚಿವರು
ಶೈಕ್ಷಣಿಕ ವಿಭಾಗ
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಗೆ,

ಪ್ರಾಂಶುಪಾಲರು, ಘಟಕ ಮತ್ತು ಸ್ನಾತಕ ಪದವಿಯ ಎಲ್ಲಾ ಸಂಯೋಜಿತ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು

ಪ್ರತಿಗಳು:

1. ಸಿಸ್ಟಂ ಅನಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು – ಪತ್ರವನ್ನು ಸ್ನಾತಕ ಪದವಿಯ ಎಲ್ಲಾ ಸಂಯೋಜಿತ ಕಾಲೇಜುಗಳಿಗೆ ಇ–ಮೇಲ್ ಕಳುಹಿಸುವುದು.
2. ಮಾನ್ಯ ಕುಲಪತಿಯವರ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಕಚೇರಿ ಪ್ರತಿ.